# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಅವ್ವಯ್ಯಮ್ಮ, ಕಾರ್ಯದರ್ಶಿ(ಗ್ರೇಡ್-1), ಹನಗೋಡು ಗ್ರಾಮ ಪಂಚಾಯಿತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ-ಆದೇಶ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು ಜಿಲ್ಲೆ, ರವರ ಆದೇಶ ಸಂಖ್ಯೆ: ಸಿ.ಸಿ.ಎ/02/2014-15, ದಿನಾಂಕ:20-04-2017.
2. ಅವ್ವಯ್ಯಮ್ಮ, ಕಾರ್ಯದರ್ಶಿ(ಗ್ರೇಡ್-1), ಇವರ ಮೇಲ್ಮನವಿ ದಿನಾಂಕ: 19-06-2017.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು ಜಿಲ್ಲೆ, ರವರ ಪತ್ರ ಸಂಖ್ಯೆ:ಸಿ.ಸಿ.ಎ/02/2014-15/, ದಿನಾಂಕ:01-09-2017.
4. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ: 25-07-2017 ಮತ್ತು 22-08-2017.

ಪ್ರಸ್ತಾವನೆ :

ಶ್ರೀಮತಿ ಅವ್ವಯ್ಯಮ್ಮ ಗ್ರಾಮ ಪಂಚಾಯಿತಿ ಕಾರ್ಯದರ್ಶಿ(ಗ್ರೇಡ್-1) ಇವರು ಹನಗೋಡು ಗ್ರಾಮ ಪಂಚಾಯಿತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ,

**ಆರೋಪ 1 :** 2012-13ನೇ ಸಾಲಿನಲ್ಲಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಗ್ರಾಮ ಪಂಚಾಯಿತಿ ತೆರಿಗೆ ರೂ.34,821/-ಗಳನ್ನು ಬ್ಯಾಂಕಿಗೆ ಕಡಿಮೆ ಜಮೆ ಮಾಡಿ ತೆರಿಗೆ ಹಣ ದುರುಪಯೋಗ ಮಾಡಿಕೊಂಡಿರುವುದು.

**ಆರೋಪ 2 :** 2012-13ನೇ ಸಾಲಿನ ಆಡಿಟ್ ವರದಿಯಂತೆ, ಕಾಮಗಾರಿ ಬಿಲ್ಲುಗಳಲ್ಲಿ ಆದಾಯ ತೆರಿಗೆ, ಮಾರಾಟ ತೆರಿಗೆ ಹಾಗೂ ರಾಜಧನಗಳಲ್ಲಿ ರೂ. 1,313/- ಗಳನ್ನು ಕಡಿಮೆ ಕಟಾಯಿಸಿರುತ್ತಾರೆ ಹಾಗೂ ಕಟಾಯಿಸಿದ ತೆರಿಗೆ ಹಣದಲ್ಲಿ ರೂ.87,641/-ಗಳನ್ನು ಜಮೆ ಮಾಡಿ, ಉಳಿಕೆ ರೂ.12,005/-ಗಳನ್ನು ಪಂಚಾಯಿತಿಯಲ್ಲೇ ಉಳಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟುಮಾಡಿರುವುದು.

**ಆರೋಪ 3 :** 2012-13ನೇ ಸಾಲಿನಲ್ಲಿ ಇಂದಿರ ಅವಾಜ್ ಯೋಜನೆಯಡಿ ಫಲಾನುಭವಿಗಳಿಗೆ ರೂ.2,47,000/-ಗಳನ್ನು ಯಾವುದೇ ಕಡತಗಳನ್ನು ನಿರ್ವಹಿಸದೆ ಅರ್ಹರಲ್ಲದ/ಫಲಾನುಭವಿಯಲ್ಲದೇ ಇರುವವರಿಗೆ ನಿಯಮಬಾಹಿರವಾಗಿ ಸರ್ಕಾರದ ಹಣವನ್ನು ಪಾವತಿಸಿರುವುದು.

**ಆರೋಪ 4 :**2012-13ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಫಲಾನುಭವಿಗಳಿಗೆ ರೂ.2,79,500/- ಗಳನ್ನು ಯಾವುದೇ ಕಡತಗಳನ್ನು ನಿರ್ವಹಿಸದೆ ಅರ್ಹರಲ್ಲದ/ಫಲಾನುಭವಿಯಲ್ಲದೇ ಇರುವವರಿಗೆ ನಿಯಮಬಾಹಿರವಾಗಿ ಸರ್ಕಾರದ ಹಣವನ್ನು ಪಾವತಿಸುವುದು.

**ಆರೋಪ 5 :** ಹನಗೋಡು ಗ್ರಾಮದ ಶ್ರೀ. ಹೆಚ್.ಬಿ. ಮಧು ಬಿನ್ ಎನ್. ಬಸವರಾಜಪ್ಪ ಇವರಿಗೆ ಸೇರಿದ ಇದೇ ಗ್ರಾಮದ ಸರ್ವೆ ನಂ.186/1, 185/5, 186/3 ಜಮೀನಿನಲ್ಲಿ ಬಡಾವಣೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೈಬರಹದ ಮೂಲಕ ನಮೂನೆ-9 ಮತ್ತು 11ನ್ನು ವಿತರಿಸಿರುತ್ತೀರಿ. ಅಲ್ಲದೆ ಬಡಾವಣೆ ನಿರ್ಮಾಣ ಮಾಡುವಾಗ ಪಾರ್ಕ್ ಹಾಗೂ

ಸಿ.ಎ ನಿವೇಶನಗಳಿಗೆ ಅವಕಾಶವನ್ನು ಕಲ್ಪಿಸದಿದ್ದರೂ ಹಾಗೂ ನಿಯಮ ರೀತ್ಯಾ ಸಕ್ಷಮ ಪ್ರಾಧಿಕಾರದಿಂದ ನಕ್ಷೆಗೆ ಅನುಮೋದನೆ ಪಡೆಯದೇ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಅನುಮೋದನೆಯನ್ನು ನೀಡಿ ಅನಧಿಕೃತ ಬಡಾವಣೆಯ 83 ನಿವೇಶನಗಳನ್ನು ಶ್ರೀ.ಹೆಚ್.ಬಿ.ಮಧು ಬಿನ್ ಎನ್.ಬಸವರಾಜಪ್ಪರವರ ಹೆಸರಿಗೆ ಡಿಮ್ಯಾಂಡ್ ವಹಿಯಲ್ಲಿ ನಮೂದಿಸಿರುವುದು ಮತ್ತು ಈ ಪೈಕಿ 12 ನಿವೇಶನಗಳಿಗೆ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಕೈಬರಹದ ಮೂಲಕ ನಮೂನೆ-9 ಮತ್ತು 11ನ್ನು ವಿತರಿಸಿ ಅದರ ಆಧಾರದ ಮೇಲೆ ನಿವೇಶನ ಮಾರಾಟ ಮಾಡಲು ಅವಕಾಶ ನೀಡಿರುವುದು.

**ಆರೋಪ 6** : ಶ್ರೀಮತಿ ಶೋಭಾ, ಬಿಲ್‌ಕಲೆಕ್ಟರ್, ಇವರನ್ನು ಕಮೀಷನ್ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ ನಿಯಮಬಾಹಿರವಾಗಿ ನೇಮಕ ಮಾಡಿಕೊಂಡಿರುವುದೆ ಅಲ್ಲದೇ ಸದರಿಯವರಿಗೆ ವಸತಿ ಯೋಜನೆಗೆ ಸಂಬಂಧಿಸಿದ ಚೆಕ್ ಪುಸ್ತಕಗಳನ್ನು ನೀಡಿದ್ದು ಸದರಿ ನೌಕರರು ಫೋರ್ಜರಿ ಸಹಿ ಮಾಡಿ ಹಣ ದುರುಪಯೋಗ ಪಡಿಸಿಕೊಂಡಿರುವರೆಂದು ದೂರು ದಾಖಲಿಸಿರುವುದು ಮತ್ತು ಸದರಿ ನೌಕರರಿಗೆ ನಿಯಮಬಾಹಿರವಾಗಿ ಹಣಕಾಸು ನಿರ್ವಹಣೆಯನ್ನು ನೀಡಿರುವುದು

ಎಂಬ ಆರೋಪಗಳ ಬಗ್ಗೆ ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ನೇಮಿಸಲಾಗಿತ್ತು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣಾ ವರದಿಯನ್ನು ದಿನಾಂಕ:21-09-2015ರಂದು ವಿಚಾರಣಾ ವರದಿಯನ್ನು ಸಲ್ಲಿಸಿ ನೌಕರರ ಮೇಲಿನ ಎಲ್ಲಾ ಆರೋಪಗಳು ಸಾಬೀತಾಗಿರುತ್ತದೆಂದು ವರದಿ ನೀಡಿರುತ್ತಾರೆ.

ನೌಕರರ ಮೇಲಿನ ಎಲ್ಲಾ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮೇಲೆ ಓದಲಾದ (1)ರ ಆದೇಶದಲ್ಲಿ ಕೆ.ಸಿ.ಎಸ್(ಸಿಸಿಎ)ನಿಯಮಾವಳಿಗಳು 1957ರ ನಿಯಮ 8(VIII)ರಡಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಮತಿ, ಅವ್ವಯ್ಯಮ್ಮ, ಕಾರ್ಯದರ್ಶಿ ಗ್ರೇಡ್-1 ರವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದರು ಹಾಗೂ ನೌಕರರ ಹಣ ದುರುಪಯೋಗದಿಂದ ಸರ್ಕಾರಕ್ಕಾಗಿರುವ ನಷ್ಟ (ತೆರಿಗೆ ವಸೂಲಾತಿ ಮೊಬಲಗು ಬಾಬ್ತು ರೂ. 1978/- ಹಾಗೂ ವಸತಿ ಯೋಜನೆಗಳ ಮೊಬಲಗು ರೂ. 3,81,500/- ಹೀಗೆ ಒಟ್ಟು ಮೊಬಲಗು ರೂ. 3,83,478/- ಗಳನ್ನು ಶೇ.15% ಬಡ್ಡಿಯೊಂದಿಗೆ ಶ್ರೀಮತಿ ಅವ್ವಯ್ಯಮ್ಮನವರಿಂದ ಭೂಕಂದಾಯ ಬಾಕಿಯಂತೆ ವಸೂಲಿ ಮಾಡಿ ಸಂಬಂಧಪಟ್ಟ ಖಾತೆಗಳಿಗೆ ಜಮಾ ಮಾಡಲು ತಮ್ಮ ಆದೇಶ ಸಂಖ್ಯೆ: ಸಿಸಿಎ/02/2014-15, ದಿನಾಂಕ: 20-04-2017ರಂದು ಆದೇಶಿಸಿದ್ದರು.

ಮೇಲೆ ಓದಲಾದ (1)ರ ಆದೇಶದ ವಿರುದ್ಧ ಶ್ರೀಮತಿ ಅವ್ವಯ್ಯಮ್ಮರವರು ಸರ್ಕಾರಕ್ಕೆ ದಿನಾಂಕ: 19-06-2017 ರಂದು ಮೇಲ್ಮನವಿ ಸಲ್ಲಿಸಿರುತ್ತಾರೆ.

ದಿನಾಂಕ:28/07/2017ರಂದು ಈ ಮೇಲ್ಮನವಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸಲಾಯಿತು. ಸದರಿ ವಿಚಾರಣೆಗೆ ಅರ್ಜಿದಾರರು, ಜಿಲ್ಲಾ ಪಂಚಾಯಿತಿ ಪರವಾಗಿ ಸಹಾಯಕ ಕಾರ್ಯದರ್ಶಿಗಳಾದ ಶ್ರೀ ಮನೋಜ್‌ಕುಮಾರ್‌ರವರು, ತಾಲ್ಲೂಕು ಪಂಚಾಯಿತಿ ಪರವಾಗಿ ಸಹಾಯಕ ನಿರ್ದೇಶಕರಾದ ಶ್ರೀ ನಿಂಗಯ್ಯರವರು ಹಾಜರಿದ್ದರು. ದಿನಾಂಕ:21-06-2017ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶಕ್ಕೆ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ನೀಡಿದ ತಡೆಯಾಜ್ಞೆಯನ್ನು ಜಾರಿಮಾಡುವಂತೆ ತಿಳಿಸಿ ಪ್ರಕರಣವನ್ನು ಮುಂದೂಡಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿಯವರು ಅಧಿಕೃತ ಜ್ಞಾಪನ ಸಂಖ್ಯೆ:ಸಿ.ಸಿ.ಎ/02/2017-15/12661, ದಿನಾಂಕ:03-08-2017ರ ಅನುಸಾರ ಶ್ರೀ ಅವ್ವಯ್ಯಮ್ಮನವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ಹುದ್ದೆಯಲ್ಲಿ ಪುನಃ ಸ್ಥಾಪಿಸಿ ಹೆಚ್.ಡಿ.ಕೋಟೆ ತಾಲ್ಲೂಕಿನ ಮಾದಾಪುರ ಗ್ರಾಮ ಪಂಚಾಯಿತಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ದಿನಾಂಕ:04/09/2017ರಂದು ವಿಚಾರಣೆಯನ್ನು ನಡೆಸಲಾಯಿತು. ಜಿಲ್ಲಾ ಪಂಚಾಯಿತಿ ಪರವಾಗಿ ಉಪಕಾರ್ಯದರ್ಶಿಗಳಾದ ಶ್ರೀ ಶಿವರಾಮೇಗೌಡರವರು ಹಾಗೂ ತಾಲ್ಲೂಕು ಪಂಚಾಯಿತಿ ಪರವಾಗಿ ಸಹಾಯಕ ನಿರ್ದೇಶಕರಾದ ಶ್ರೀ ನಿಂಗಯ್ಯ ಹಾಗೂ ಅರ್ಜಿದಾರರು ಹಾಜರಿದ್ದರು. ಹಾಜರಿದ್ದ ಎಲ್ಲರ ಹೇಳಿಕೆಯನ್ನು ಪಡೆಯಲಾಯಿತು. ಜಿಲ್ಲಾ ಪಂಚಾಯತ್‌ನಿಂದ ನೀಡಲಾದ ಕಂಡಿಕೆವಾರು ಉತ್ತರದ ಪ್ರತಿಯನ್ನು ಅರ್ಜಿದ್ಧಾರರಿಗೆ ನೀಡಲಾಯಿತು ಹಾಗೂ ಅದರಲ್ಲಿನ ಅಂಶಗಳಿಗೆ ತಮ್ಮ ಲಿಖಿತ ಉತ್ತರವನ್ನು ನೀಡುವಂತೆ ತಿಳಿಸಿ ಪ್ರಕರಣವನ್ನು ಆದೇಶಕ್ಕಾಗಿ ಮುಂದೂಡಲಾಯಿತು.

ಜಿಲ್ಲಾ ಪಂಚಾಯತ್‌ರವರು ದಿನಾಂಕ:04-09-2017ರಂದು ಸಲ್ಲಿಸಿದ ಕಂಡಿಕೆವಾರು ಉತ್ತರದಲ್ಲಿ ಈ ಕೆಳಕಂಡಂತೆ ನೀಡಿರುತ್ತಾರೆ.

- ಶ್ರೀಮತಿ ಅವ್ವಯ್ಯಮ್ಮನವರು ಅನುಗೋಡು ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ: 02-07-2007 ರಿಂದ 02-03-2013ರವರೆಗೆ ಪ್ರಭಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಆರೋಪಿತ ನೌಕರರು ದಿನಾಂಕ: 21-01-2013ರಂದು ಹುಣಸೂರು ಎಸ್.ಬಿ.ಎಂ. ಬ್ಯಾಂಕ್‌ನ ವ್ಯವಸ್ಥಾಪರಿಗೆ ಪತ್ರ ಬರೆದು ಖಾತೆ ಸಂಖ್ಯೆ:64002241278ರ ಚೆಕ್ ಪುಸ್ತಕ ಕಳೆದುಹೋಗಿದೆ ಎಂದೂ ಆದ್ದರಿಂದ ಯಾವುದೇ ಚೆಕ್‌ನ್ನು ಸದರಿ ಖಾತೆಯಿಂದ ನಗದೀಕರಿಸಬಾರದೆಂದು ವಿನಂತಿಸಿಕೊಂಡಿರುತ್ತಾರೆ. ನಂತರ ದಿನಾಂಕ:23-01-2013ರಂದು ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್‌ರವರು ಚೆಕ್ ಪುಸ್ತಕ ಕಳವುಮಾಡಿ, ತಮ್ಮ ಸಹಿಯನ್ನು ಫೋರ್ಜರಿ ಮಾಡಿ ಸುಮಾರು ಹಣವನ್ನು ಡ್ರಾ ಮಾಡಿರುತ್ತಾರೆಂದು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಿರುತ್ತಾರೆ.
- ಆದರೆ ಈ ದಿನಾಂಕಗಳಿಗಿಂತ ಮುಂಚೆಯೆ ಇಂದಿರಾ ಆವಾಜ್ ಹಾಗೂ ಆಶ್ರಯ ಯೋಜನೆಯಡಿ ರೂ.3,81,500/-ಗಳು ನಗದಿಸಲ್ಪಟ್ಟಿರುತ್ತವೆ. ಯಾವುದೇ ಚೆಕ್‌ಗಳು ಪಾವತಿಯಾಗಬೇಕಾದರೆ ಅಧ್ಯಕ್ಷರ ಸಹಿಯು ಅವಶ್ಯಕವಾಗಿರುತ್ತದೆ. ಆದರೆ ಅಧ್ಯಕ್ಷರ ವಿರುದ್ಧ ಎಫ್.ಐ.ಆರ್ ದಾಖಲಿಸಿರುವುದಿಲ್ಲ ಹಾಗೂ ಸದರಿ ಮೊತ್ತದ ಚೆಕ್‌ಗಳು ವಿತರಣೆಯಾಗಿರುವುದು ಅಂದಿನವರೆಗೂ ತಮ್ಮ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳಿರುವುದನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಈ ಅಂಶಗಳನ್ನು ಪರಿಗಣಿಸಿಯೇ ವಿಚಾರಣಾಧಿಕಾರಿಗಳು 3 ಮತ್ತು 4ನೇ ಆರೋಪಗಳು ಸಾಬೀತಾಗಿರುತ್ತವೆ ಎಂದು ವರದಿ ನೀಡಿರುತ್ತಾರೆ.
- ಆರೋಪಿತ ನೌಕರರು ಸ.ನಂ.185/5ರ ಒಂದು ಎಕರೆ 16 ಗುಂಟೆ, ಸ.ನಂ.186/1ರ 25ಗುಂಟೆ ಮತ್ತು ಸ.ನಂ.186/3ರ 38ಗುಂಟೆ, ಹೀಗೆ ಒಟ್ಟು 2 ಎಕರೆ 39ಗುಂಟೆ ಜಮೀನು ಜಿಲ್ಲಾಧಿಕಾರಿಗಳಿಂದ ಭೂಪರಿವರ್ತನೆ ಆದ ನಂತರ ಬಡಾವಣೆ ನಕ್ಷೆಯನ್ನು ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ನಮೂನೆ 9 ಮತ್ತು 11 ಅನ್ನು ವಿತರಿಸಬೇಕಾಗಿತ್ತು. ಆದರೇ ಆ ರೀತಿ ನಕ್ಷೆ ಅನುಮೋದನೆಯಾಗದೆ ಕೈಬರಹದಲ್ಲಿ 12 ನಿವೇಶನಗಳಿಗೆ ನಮೂನೆ 9 ಮತ್ತು 11ನ್ನು ವಿತರಿಸಿರುತ್ತಾರೆ. ಸದರಿ ಆರೋಪವು ವಿಚಾರಣೆಯಲ್ಲಿ ಸಾಬೀತಾಗಿರುತ್ತದೆ.
- ಆರೋಪಿತ ನೌಕರರು ಇಲಾಖಾ ವಿಚಾರಣೆ ನಡೆಸುವ ಸಮಯದಲ್ಲಿ ವಿಚಾರಣಾಧಿಕಾರಿಗಳು ತಮಗೆ ಏನನ್ನು ಹೇಳಲು ಅವಕಾಶ ನೀಡಿರುವುದಿಲ್ಲ ಎಂದು ಮೇಲ್ಮನವಿಯಲ್ಲಿ ಆರೋಪಿಸಿರುತ್ತಾರೆ. ಆದರೆ ಈ ಬಗ್ಗೆ ವಿಚಾರಣೆ ನಡೆಸುವ

ಹಂತದಲ್ಲಿಯೇ ಆಕ್ಷೇಪಿಸಬಹುದಾಗಿತ್ತು ಹಾಗೂ ವಿಚಾರಣಾಧಿಕಾರಿಗಳನ್ನು ಬದಲಿಸುವಂತೆ ಶಿಸ್ತುಪ್ರಾಧಿಕಾರಿಗಳನ್ನು ಮನವಿ ಮಾಡಬಹುದಿತ್ತು.

- ಗ್ರಾಮ ಪಂಚಾಯಿತಿಯ ಎಲ್ಲಾ ದಾಖಲೆಗಳು ನಿಯಮಾನುಸಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯ ಅಭಿರಕ್ಷೆಯಲ್ಲಿ ಇರಬೇಕಗುತ್ತದೆ. ಆದರೆ ಶಾಶ್ವತ ನೌಕರರಲ್ಲದ ಬಿಲ್ ಕಲೆಕ್ಟರ್ ಆದ ಶೋಭರವರ ಸುಪರ್ದಿಯಲ್ಲಿ ಉಳಿಯುವಂತೆ ಮಾಡಿರುವುದು ಆರೋಪಿತ ನೌಕರರ ಕರ್ತವ್ಯಲೋಪವಾಗಿರುತ್ತದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ರುಜುವಾತಾಗಿರುವ ಆರೋಪಗಳ ತೀವ್ರತೆಯನ್ನು ಗಮನಿಸಿ ಮೇಲ್ಮನವಿಯನ್ನು ವಜಾಗೊಳಿಸಬೇಕಾಗಿ ಕೋರಿರುತ್ತಾರೆ.

ಆಪಾದಿತ ನೌಕರರು ತಮ್ಮ ಮೇಲ್ಮನವಿಯಲ್ಲಿ ಹಾಗೂ ದಿನಾಂಕ:04-09-2017ರಂದು ಜಿಲ್ಲಾ ಪಂಚಾಯತ್‌ನಿಂದ ನೀಡಲಾದ ಕಂಡಿಕೆವಾರು ಉತ್ತರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತಮ್ಮ ಲಿಖಿತ ಹೇಳಿಕೆಯನ್ನು ದಾಖಲಿಸಿರುತ್ತಾರೆ.

- ಆಶ್ರಯ ಹಾಗೂ ಇಂದಿರಾ ಆವಾಜ್ ಯೋಜನೆಯ ಚೆಕ್ ಪುಸ್ತಕ ಕಾಣೆಯಾಗಿರುವುದು ತಮ್ಮ ಗಮನಕ್ಕೆ ಬಂಧ ತಕ್ಷಣ ದಿನಾಂಕ:21-01-2013ರಂದು ಹುಣಸೂರು ಎಸ್.ಬಿ.ಎಂ. ಬ್ಯಾಂಕ್‌ನ ವ್ಯವಸ್ಥಾಪರಿಗೆ ಪತ್ರ ಬರೆದು ಖಾತೆ ಸಂಖ್ಯೆ:64002241278ರ ಚೆಕ್ ಪುಸ್ತಕ ಕಳೆದುಹೋಗಿದೆ ಎಂದೂ ಆದ್ದರಿಂದ ಯಾವುದೇ ಚೆಕ್‌ನ್ನು ಸದರಿ ಖಾತೆಯಿಂದ ನಗದೀಕರಿಸಬಾರದೆಂದು ವಿನಂತಿಸಿಕೊಂಡಿರುತ್ತೇನೆ.
- ಈ ಘಟನೆ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ: 23-01-2013ರಂದು ಪತ್ರ ಬರೆದು ವರದಿ ಮಾಡಿರುತ್ತೇನೆ.
- ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಆಶ್ರಯ ಹಾಗೂ ಇಂದಿರಾ ಆವಾಜ್ ಯೋಜನೆಯ ಚೆಕ್ ಪುಸ್ತಕ ಕಾಣೆಯಾಗಿರುವ ಬಗ್ಗೆ ಬಿಲ್ ಕಲೆಕ್ಟರ್ ಆದ ಶ್ರೀಮತಿ ಶೋಭಾರವರ ವಿರುದ್ಧ ಎಫ್.ಐ.ಆರ್ ದಾಖಲಿಸಿರುತ್ತೇನೆ. ನಾನು ಪಿ.ಡಿ.ಓ ಆಗಿ ಕಾರ್ಯವರದಿ ಮಾಡಿಕೊಳ್ಳುವ ಮೊದಲೇ ಆಪಾದಿತ ಶ್ರೀಮತಿ ಶೋಭಾರವರು ಚೆಕ್ ಬುಕ್ ಕಳವು ಮಾಡಿದ್ದು, ಪೋರ್ಜರಿ ಸಹಿ ಮಾಡಿ ಹಣ ಸೆಳೆದಿರುತ್ತಾರೆ.
- ಹನಗೋಡು ಗ್ರಾಮ ಪಂಚಾಯಿತಿಯಲ್ಲಿ ನಡೆದ ಘಟನೆ ಕುರಿತು ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ:26-01-2013ರಂದು ವರದಿ ಮಾಡಿರುತ್ತೇನೆ.
- ಹನಗೋಡು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪ ಹಾಗೂ ತಾತ್ಕಾಲಿಕ ನೌಕರರಾದ ಶ್ರೀ ಶೋಭಾರವರು ಅವ್ಯವಹಾರ ನಡೆಸಿದ್ದು, ಈ ಬಗ್ಗೆ ಖುದ್ದು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ: 04-02-2013ರಂದು ಪತ್ರ ಬರೆದಿದ್ದರು. ಬಿಲ್ ಕಲೆಕ್ಟರ್ ಶೋಭಾರವರು ಪಿಡಿಓ ರವರ ಸಹಿಯನ್ನು ಫೋರ್ಜರಿ ಮಾಡಿರುವ ಸಂಬಂಧ ಮಾದರಿ ಸಹಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಾರ್ಯನಿರ್ವಾಹಕ ಅಧಿಕಾರಿಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ:06-08-2013ರಂದು ವರದಿ ಮಾಡಿರುತ್ತಾರೆ.
- ಗ್ರಾಮ ಪಂಚಾಯಿತಿಯ ಎಲ್ಲಾ ದಾಖಲೆಗಳು ಪಿ.ಡಿ.ಓ/ಕಾರ್ಯದರ್ಶಿಯವರ ಅಭಿರಕ್ಷೆಯಲ್ಲಿ ಇರಬೇಕು ಎಂದರೆ ಸರಿ. ಅದರಂತೆ ಗ್ರಾಮ ಪಂಚಾಯಿತಿಯ ವಿವಿಧ ಕಾರ್ಯಕ್ರಮಗಳ ಒಟ್ಟು 23 ಚೆಕ್ ಪುಸ್ತಕಗಳಿದ್ದು, ಆಶ್ರಯ ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿಗಳಿಗೆ ಆನ್‌ಲೈನ್ ಮೂಲಕ ಹಣ ಪಾವತಿ ಪದ್ಧತಿ

ಇದ್ದುದ್ದರಿಂದ ಚೆಕ್ ಬುಕ್ ಬಳಕೆ ನಿಲ್ಲಿಸಲಾಗಿತ್ತು. ಚೆಕ್ ಪುಸ್ತಕದ ಮಧ್ಯೆ ಮಧ್ಯೆ ಚೆಕ್ ಲೀಫ್‌ಗಳನ್ನು ಬಿಲ್ ಕಲೆಕ್ಟರ್ ಕದ್ದು ದುರ್ಬಳಕೆ ಮಾಡಿಕೊಂಡಿರುತ್ತಾರೆ.

- ಸ.ನಂ.185/5ರ ಒಂದು ಎಕರೆ 16 ಗುಂಟೆ, ಸ.ನಂ.186/1ರ 25ಗುಂಟೆ ಮತ್ತು ಸ.ನಂ.186/3ರ 38ಗುಂಟೆ, ಹೀಗೆ ಒಟ್ಟು 2 ಎಕರೆ 39 ಗುಂಟೆ ಜಮೀನು ಜಿಲ್ಲಾಧಿಕಾರಿಗಳಿಂದ ಭೂಪರಿವರ್ತನೆ ಆದ ನಂತರ ಬಡಾವಣೆ ನಕ್ಷೆಯನ್ನು ನಗರಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ನಮೂನೆ 9 ಮತ್ತು 11ನ್ನು ವಿತರಿಸಬೇಕಾಗಿತ್ತು. ಆದರೆ ಆ ರೀತಿ ನಕ್ಷೆ ಅನುಮೋದನೆಯಾಗದೆ ಕೈಬರಹದಲ್ಲಿ 12 ನಿವೇಶನಗಳಿಗೆ ನಮೂನೆ 9 ಮತ್ತು 11ನ್ನು ವಿತರಿಸಿರುತ್ತಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 836 ಗ್ರಾಪಂಅ 2013(ಭಾ-7), ದಿನಾಂಕ:31-10-2013ರಂತೆ ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗಡೆಯಿರುವ ಪ್ರದೇಶಗಳ ಆಸ್ತಿಗಳ ಲೇ ಔಟ್ ಪ್ಲಾನ್‌ಗಳಿಗೆ ನಗರ ಯೋಜನಾ ನಿರ್ದೇಶನಾಲಯದ ಅನುಮೋದನೆಯ ಅಗತ್ಯವಿರುವುದಿಲ್ಲವೆಂದು ತಿಳಿಸಲಾಗಿದೆ. ಅದರಂತೆ 12 ನಿವೇಶನಗಳಿಗೆ ನಮೂನೆ 9 ಮತ್ತು 11ನ್ನು ವಿತರಿಸಲಾಗಿದೆಯೆಂದು ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಆದುದರಿಂದ ಮೇಲ್ಮನವಿಯಲ್ಲಿನ ಅಂಶಗಳನ್ನು ಪರಿಗಣಿಸಿ ತಮಗೆ ವಿಧಿಸಿರುವ ದಂಡನಾದೇಶವನ್ನು ರದ್ದುಪಡಿಸಿ ತಮಗೆ ನ್ಯಾಯ ಒದಗಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಪರಿಶೀಲಿಸಲಾಗಿದೆ. ಆಪಾದಿತ ನೌಕರರ ವಿರುದ್ಧದ ಆರೋಪವು ಸಾಬೀತಾಗಿರುವುದಿಲ್ಲ. ಆದುದರಿಂದ ಸದರಿ ನೌಕರರ ಮೇಲೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವಿಧಿಸಿರುವ ದಂಡನಾದೇಶವು ಸಮಂಜಸವಲ್ಲ ಎಂದು ಸರ್ಕಾರವು ನಿರ್ಣಯಿಸಿದೆ ಹಾಗೂ ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ) ನಿಯಮಗಳು 1957 ನಿಯಮ 25ರಡಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/540/ಗ್ರಾಪಂಕಾ/2017**
**ಬೆಂಗಳೂರು, ದಿನಾಂಕ:20-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957ರ ನಿಯಮ 25(2)ರಡಿಯಲ್ಲಿ ಶ್ರೀಮತಿ ಅವ್ವಯ್ಯಮ್ಮ, ಕಾರ್ಯದರ್ಶಿ(ಗ್ರೇಡ್-1), ಹನಗೋಡು ಗ್ರಾಮ ಪಂಚಾಯಿತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಇವರ ಮೇಲ್ಮನವಿಯನ್ನು ಅಂಗೀಕರಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು ಜಿಲ್ಲೆ, ರವರ ಆದೇಶ ಸಂಖ್ಯೆ: ಸಿ.ಸಿ.ಎ/02/2014-15, ದಿನಾಂಕ: 20-04-2017ರ ರದ್ದುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

20/2

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.
4) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.
5) ಶ್ರೀಮತಿ ಅವ್ವಯ್ಯಮ್ಮ, ಕಾರ್ಯದರ್ಶಿ(ಗ್ರೇಡ್-1), ಮಾದಾಪುರ ಗ್ರಾಮ ಪಂಚಾಯಿತಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.
6) ಶಾಖಾ ರಕ್ಷಕ ಪ್ರತಿ.